ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2116
ಸದಸ್ಯರ ಹೆಸರು : ಶ್ರೀ ಸುನೀಲ್ ಗೌಡ ಬಿ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 17.03.2022
ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
(ಅ)	ಸಂಚಾರಿ ಪೊಲೀಸರು ಸಂಚಾರಿ ದಟ್ಟಣೆಯನ್ನು ಸರಿಪಡಿಸದೇ ಕೇವಲ ವಾಹನಗಳಿಗೆ ದಂಡವಿಧಿಸುತ್ತಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ;	ಸಂಚಾರ ದಟ್ಟಣೆಯನ್ನು ಸರಿಪಡಿಸಲು ರಾಜ್ಯದ ಮಹಾನಗರಗಳಲ್ಲಿ ಕೈಗೊಂಡ ಕ್ರಮಗಳ ವಿವರಗಳನ್ನು **ಅನುಬಂಧ-1** ರಲ್ಲಿ ಮತ್ತು ಜಿಲ್ಲಾ ಕೇಂದ್ರಗಳು ಹಾಗೂ ಪಟ್ಟಣಗಳಲ್ಲಿ ಕೈಗೊಂಡ ಕ್ರಮಗಳ ವಿವರಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ.
(ಆ)	ಬಂದಿದ್ದಲ್ಲಿ, ರಾಜ್ಯದ ಮಹಾನಗರಗಳು, ಜಿಲ್ಲಾ ಕೇಂದ್ರಗಳು ಮತ್ತು ಪಟ್ಟಣಗಳಲ್ಲಿ ಸಂಚಾರಿ ದಟ್ಟಣೆಯನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?	

ಹೆಚ್‌ಡಿ 127 ಎಸ್‌ಎಸ್‌ಟಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಅನುಬಂಧ-1

ರಾಜ್ಯದ ಮಹಾನಗರಗಳು, ಜಿಲ್ಲೆ ಕೇಂದ್ರಗಳು ಮತ್ತು ಪಟ್ಟಣಗಳಲ್ಲಿ ಸಂಚಾರಿ ದಟ್ಟಣೆಯನ್ನು ಸರಿಪಡಿಸಲು ಕೈಗೊಂಡ ಕ್ರಮಗಳು.

ಸಂಚಾರ ದಟ್ಟಣೆಯನ್ನು ಸರಿಪಡಿಸಲು ಮಹಾನಗರ ಪಾಲಿಕೆಯಲ್ಲಿ ಕೈಗೊಂಡ ಕ್ರಮಗಳ ವಿವರಗಳು ಈ ಕೆಳಕಂಡಂತ್ತಿರುತ್ತದೆ.

1. ಬೆಂಗಳೂರು ನಗರ:

ಬೆಂಗಳೂರು ನಗರ ಸಂಚಾರ ವಿಭಾಗವು ವಾಹನ ಸಂಚಾರ ಸಂಚಾರ ಸಮಸ್ಯೆಗಳ ಸುಧಾರಣೆಗೆ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಂಡು ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗಿದೆ.

❖ ಹೈ ಡೆನ್ಸಿಟಿ ಕಾರಿಡಾರ್ ರಸ್ತೆಗಳು:

ಬೆಂಗಳೂರು ನಗರದಲ್ಲಿ ಪ್ರತಿನಿತ್ಯ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ವಾಹನ ಸಂಖ್ಯೆಗೆ ಪ್ರಮುಖ ಕಾರಣವಾದ ಆರ್ಥಿಕ ಉದಾರೀಕರಣದ ಪರಿಣಾಮದಿಂದ ಹೊಸ ಬಡಾವಣೆಗಳ ನಿರ್ಮಾಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ, ಮಾಹಿತಿ/ಜೈವಿಕ ತಂತ್ರಜ್ಞಾನ ಸಂಸ್ಥೆಗಳ ಸ್ಥಾಪನೆ ಇವೆಲ್ಲದರ ನೇರ ಪರಿಣಾಮವಾಗಿ ವಾಹನಗಳ ಸಂಚಾರ ಹೆಚ್ಚುತ್ತಲೇ ಇದೆ. ಜನಸಂಖ್ಯೆ ಹಾಗೂ ವಾಹನಗಳ ಸಂಖ್ಯೆಯಲ್ಲಿ ಹೆಚ್ಚಳಗೊಂಡಿದ್ದರ ಪರಿಣಾಮ ಅನೇಕ ರೀತಿಯಲ್ಲಿ ಸಂಚಾರ ಸಮಸ್ಯೆಗಳು ಅಂದರೆ ಸಂಚಾರದಲ್ಲಿ ದಟ್ಟಣೆ, ಸುಗಮ ಸಂಚಾರಕ್ಕೆ ಅಡ್ಡಿ, ಸಂಚಾರ ಸ್ಥಗಿತಗಳ ಜೊತೆಗೆ ಅಪಘಾತಗಳ ಹೆಚ್ಚಳಕ್ಕೆ ಕಾರಣವಾಗಿದೆ. ಈ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಘನ ಸರ್ಕಾರವು ಬೆಂಗಳೂರು ನಗರ ಸಂಚಾರ ವ್ಯವಸ್ಥೆ ಸುಧಾರಣೆಗೆ ಹತ್ತು ಹಲವು ವಿನೂತನ ಯೋಜನೆಗಳನ್ನು ಹಂತ ಹಂತವಾಗಿ ಹಮ್ಮಿಕೊಳ್ಳುವ ಸಲುವಾಗಿ ಕಾರ್ಯ ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರದ ಅಡಿ ಇರುವ ಎಲ್ಲಾ ಇಲಾಖೆಗಳು ಒಂದೇ ಸೂರಿನಡಿ ಸೇರಿ ಕಾರ್ಯ ನಿರ್ವಹಿಸುವ ನಿಟ್ಟಿನಲ್ಲಿ ಶ್ರಮ ವಹಿಸುತ್ತಿದೆ. ಸರ್ಕಾರದ ಆದೇಶದ ಮೇರೆಗೆ ಹೈ ಡೆನ್ಸಿಟಿ ಕಾರಿಡಾರ್ ರಸ್ತೆಗಳಲ್ಲಿನ ಆಗಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಪೂರೈಸಲು ಕೆ.ಆರ್.ಡಿ.ಸಿ.ಎಲ್ ಗೆ ವಹಿಸಲಾಗಿದೆ.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಂಚಾರ ವ್ಯವಸ್ಥೆಯನ್ನು ಉತ್ತಮ ಪಡಿಸುವ ಸಲುವಾಗಿ ನಗರ ವ್ಯಾಪ್ತಿಯಲ್ಲಿ ಈ ಕೆಳಕಂಡ 12 ಹೆಚ್ಚು ವಾಹನ ದಟ್ಟಣೆ ಕಾರಿಡಾರ್‌ಗಳನ್ನು ಗುರ್ತಿಸಲಾಗಿದೆ.

1.	ಬಳ್ಳಾರಿ ರಸ್ತೆ	–	ಚಾಲುಕ್ಯ ವೃತ್ತದಿಂದ ಹೆಬ್ಬಾಳದವರೆಗೆ ವಿಂಡ್ಸರ್ ಮ್ಯಾನರ್ ಜಂಕ್ಷನ್ – ರಮಣ ಮಹರ್ಷಿ ರಸ್ತೆ – ಮೇಖ್ರಿ ವೃತ್ತದ ಮಾರ್ಗವಾಗಿ
2	ಹಳೇ ಮದ್ರಾಸ್ ರಸ್ತೆ	–	ಟ್ರಿನಿಟಿ ವೃತ್ತದಿಂದ ಕೆ.ಆರ್. ಪುರಂ ವರೆಗೆ ಹಲಸೂರು ಕೆರೆ – ಹಳೆ ಮದ್ರಾಸ್ ರಸ್ತೆ ಮತ್ತು ಬೆನ್ನಿಗಾನಹಳ್ಳಿ ಹಾಗೂ ಕೆ.ಆರ್. ಪುರಂನಿಂದ ರಾಷ್ಟ್ರೀಯ ಹೆದ್ದಾರಿ 648 ವರೆಗೆ ಹೂಡಿ – ಐಟಿಪಿಎಲ್ ಮತ್ತು ಹೋಫ್ ಫಾರಂ ಮಾರ್ಗವಾಗಿ

- ಪೀಕ್ ಅವರ್‌ಗಳಲ್ಲಿ ಬೆಂಗಳೂರು ನಗರದ ಎಲ್ಲಾ ಜಂಕ್ಷನ್ ಮತ್ತು ರಸ್ತೆಗಳಲ್ಲಿ ಸಂಚಾರ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳು ಸಂಚಾರ ನಿರ್ವಹಣೆಯಲ್ಲಿ ತೊಡಗಿಕೊಂಡು ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುತ್ತಾರೆ.
- ಪ್ರತಿಯೊಂದು ಸಂಚಾರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಒಂದೊಂದು ಪ್ರಮುಖ ರಸ್ತೆಗಳನ್ನು ಗುರುತಿಸಿ ಮಾದರಿ ರಸ್ತೆಯನ್ನಾಗಿ ಅಳವಡಿಸಿಕೊಳ್ಳಲಾಗಿದೆ ಹಾಗೂ ಇಂತಹ ಮಾದರಿ ರಸ್ತೆಗಳಲ್ಲಿ ಯಾವುದೇ ರೀತಿಯ ಸಂಚಾರ ಸಮಸ್ಯೆಗಳು ಸಂಭವಿಸದಂತೆ ಹಾಗೂ ರಸ್ತೆ ಸುರಕ್ಷತೆ ಕಟ್ಟುನಿಟ್ಟಾಗಿ ಜಾರಿ ಮಾಡಲಾಗಿದೆ.
- ಬೆಂಗಳೂರು ನಗರದಾದ್ಯಂತ ಅವೈಜ್ಞಾನಿಕ ಹಾಗೂ ಅನಧಿಕೃತವಾಗಿ ನಿರ್ಮಿಸಲಾಗಿದ್ದ ರಸ್ತೆ ಉಬ್ಬುಗಳನ್ನು ತೆರವುಗೊಳಿಸಲಾಗಿದೆ. ಪ್ರಮುಖ ರಸ್ತೆಗಳಲ್ಲಿ ವಾಹನದ ವೇಗವನ್ನು ನಿಯಂತ್ರಿಸಿ ಅಪಘಾತಗಳನ್ನು ತಡೆಯುವ ಸಲುವಾಗಿ ಹಾಗೂ ಅವಶ್ಯಕವಿರುವ ಸ್ಥಳಗಳಲ್ಲಿ ಮಾತ್ರವೇ ಐ.ಅರ್.ಸಿ ಮಾದರಿಯಲ್ಲಿ ವೈಜ್ಞಾನಿಕವಾಗಿ ರಸ್ತೆ ಉಬ್ಬುಗಳನ್ನು ನಿರ್ಮಿಸಲಾಗಿದೆ.
- ಪ್ರತಿ ಸಂಚಾರ ಪೊಲೀಸ್ ಠಾಣಾ ಮಟ್ಟದಲ್ಲಿ ಪ್ರತಿ ತಿಂಗಳ ಮೂರನೇ ಶನಿವಾರಗಳಂದು ನಾಗರೀಕ ಸಂಚಾರ ವೇದಿಕೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದು, ಆಯಾ ಸಂಚಾರ ಠಾಣಾ ವ್ಯಾಪ್ತಿಯ ನಾಗರೀಕರು ತಮ್ಮ ಸಂಚಾರ ಸಮಸ್ಯೆಗಳನ್ನು ಠಾಣಾ ಮಟ್ಟದಲ್ಲಿ ಪರಿಹರಿಸಿಕೊಳ್ಳುವ ವೇದಿಕೆಯನ್ನು ಸೃಜಿಸಲಾಗಿದೆ.
- ಬೆಂಗಳೂರು ನಗರದಲ್ಲಿ ಸಂಚಾರ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಸುಗಮ ಸಂಚಾರ ಜಾರಿ ಮಾಡಲು ಮತ್ತು ರಸ್ತೆಯಲ್ಲಿ ಸುರಕ್ಷತೆಯನ್ನು ಜಾರಿ ಮಾಡಲು ಹಲವಾರು ಕ್ರಮಗಳನ್ನು, ಆಂದೋಲನಗಳನ್ನು ಹಾಗೂ ವೃತ್ತಿಪರ ಚಾಲಕರುಗಳಿಗೆ ಹಲವಾರು ತರಬೇತಿ ಹಾಗೂ ರಸ್ತೆ ಸುರಕ್ಷತೆಯ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು ರಸ್ತೆ ಸುರಕ್ಷತೆಯನ್ನು ಅತ್ಯುತ್ತಮ ರೀತಿಯಲ್ಲಿ ಜಾರಿ ಮಾಡಲಾಗಿದೆ.
- ಪೀಕ್ ಅವರ್‌ಗಳಲ್ಲಿ ಸಂಚಾರ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳು ಸಂಚಾರ ನಿರ್ವಹಣೆಯಲ್ಲಿ ತೊಡಗಿಕೊಂಡಿರುವ ಕಾರಣ ಅಂತಹ ಸಂದರ್ಭದಲ್ಲಿ ಕಣ್ಗಾವಲು, ಹಾಗೂ ಡಿಜಿಟಲ್ ಕ್ಯಾಮರಾಗಳ ಮೂಲಕ ಉಲ್ಲಂಘನೆ ಎಸಗುವ ವಾಹನಗಳ ಛಾಯಾಚಿತ್ರವನ್ನು ಸೆರೆಹಿಡಿದು ಅವರುಗಳ ವಿರುದ್ಧ ಐ.ಎಂ.ವಿ 133 ನೋಟೀಸ್‌ಗಳನ್ನು ಕಳುಹಿಸಿ ದಂಡ ಪಾವತಿಸಿಕೊಳ್ಳಲಾಗುತ್ತಿದೆ.
- ನಗರದ ರಸ್ತೆಗಳಲ್ಲಿ ಸಂಚಾರ ಸಮಸ್ಯೆಗಳಿಗೆ ಪ್ರಮುಖ ಕಾರಣವಾಗಿರುವ ವಾಹನಗಳ ಅನಧಿಕೃತ, ತಪ್ಪು ನಿಲುಗಡೆ ಹಾಗೂ ಫುಟ್‌ಪಾತ್‌ಮೇಲೆ ವಾಹನ ನಿಲುಗಡೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ.
- ಬೆಂಗಳೂರು ನಗರದಾದ್ಯಂತ' ಸಮಾನ ವೇಗಮಿತಿಯನ್ನು ಜಾರಿಗೊಳಿಸಲಾಗಿದ್ದು ಅತಿ ವೇಗವಾಗಿ ಚಲಿಸುವವರ ವಿರುದ್ಧವೂ ಸಹ ಕಟ್ಟು ನಿಟ್ಟಿನ ಕ್ರಮಗಳನ್ನು ಜರುಗಿಸಲಾಗಿದೆ. ಬೆಂಗಳೂರು ನಗರ ಸಂಚಾರ ವಿಭಾಗದಲ್ಲಿ ಒಟ್ಟು 13 ಇಂಟರ್‌ಸೆಪ್ಟರ್ ವಾಹನಗಳು ಕಾರ್ಯ ನಿರ್ವಹಿಸುತ್ತಿವೆ.
- ಇದೇ ರೀತಿ ಅಡ್ಡಾ ದಿಡ್ಡಿಯಾಗಿ ವಾಹನ ಚಾಲನೆ ಮಾಡುವವರ ವಿರುದ್ಧ ಅಪಾಯಕಾರಿ ಚಾಲನೆ (Dangerous Driving) ಪ್ರಕರಣಗಳನ್ನು ದಾಖಲಿಸುತ್ತಿದೆ.
- ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರನ್ನು ಪತ್ತೆ ಮಾಡಲು ಅತ್ಯಾಧುನಿಕ ಅಲ್ಕೋಮೀಟರ್‌ಗಳನ್ನು ಖರೀದಿಸಲಾಗಿದ್ದು ಅವುಗಳ ಮೂಲಕ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿರುವವರನ್ನು ಪತ್ತೆ ಮಾಡಲಾಗುತ್ತಿದೆ. ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗವು ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಂಡಿರುತ್ತದೆ.
- ಬೆಂಗಳೂರು ನಗರ ರಸ್ತೆಗಳಲ್ಲಿ ಪಥ ಶಿಸ್ತು ನಿಯಮಗಳನ್ನು ಉಲ್ಲಂಘಿಸುವ ವಾಹನ ಚಾಲಕರುಗಳಿಗೆ ಕಠಿಣ ನಿಯಮಗಳ ಜಾರಿಯ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

❖ ಡ್ರಾಗ್ ರೇಸಿಂಗ್ ಮತ್ತು ವೀಲಿಂಗ್ ಮತ್ತು ಅಡ್ಡಾದಿಡ್ಡಿ ವಾಹನ ಚಾಲನೆ ಮಾಡುವುದನ್ನು ತಡೆಯಲು ಶಾಲಾ ಕಾಲೇಜು, ವಾಣಿಜ್ಯ ಮಳಿಗೆ ಹಾಗೂ ಪ್ರಮುಖ ಸ್ಥಳಗಳಲ್ಲಿ ಕೋಬ್ರಾ ಹಾಗೂ ಸಂಚಾರ ಪೊಲೀಸರ ಗಸ್ತುಗಳನ್ನು ಏರ್ಪಡಿಸಲಾಗಿದೆ. ವೀಲಿಂಗ್/ಡ್ರ್ಯಾಗ್ ರೇಸ್‌ನಲ್ಲಿ ತೊಡಗಿಸಿಕೊಂಡಿರುವವರ ಐ.ಎಂ.ವಿ. ಹಾಗೂ ಐ.ಪಿ.ಸಿ. ಕಾಯ್ದೆ ರಿತ್ಯಾ ಪ್ರಕರಣಗಳನ್ನು ದಾಖಲಿಸಲಾಗುತ್ತಿರುತ್ತದೆ.

❖ ಸಂಚಾರ ನಿರ್ವಹಣಾ ಕೇಂದ್ರವು (ಟಿಎಂಸಿ) ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಬೆಂಗಳೂರು ನಗರದಾದ್ಯಂತ ಅಳವಡಿಸಲಾಗಿರುವ ಕಣ್ಗಾವಲು ಕ್ಯಾಮರಾದ ಮೂಲಕ ಟಿಎಂಸಿಯಲ್ಲಿ ಅಳವಡಿಸಲಾಗಿರುವ ವಿಡಿಯೋವಾಲ್‌ನ ಮುಖಾಂತರ ಸಂಚಾರ ದಟ್ಟಣೆಯನ್ನು ನಿವಾರಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ. 26 ಕಾರಿಡಾರ್‌ಗಳಲ್ಲಿ ಎರಡು ಪಾಳಿಯಲ್ಲಿ ನಿತ್ಯ ಕ್ಯಾಮರಾ ವೀಕ್ಷಿಸಿ ಜಂಕ್ಷನ್‌ಗಳಲ್ಲಿನ ಸಂಚಾರದ ದಟ್ಟಣೆಯನ್ನು ಪರಿಶೀಲಿಸಿ, ಸಿಗ್ನಲ್ ಲೈಟ್‌ನ ಸಮಯವನ್ನು ಟಿಎಂಸಿಯಿಂದಲೇ ಬದಲಾವಣೆ ಮಾಡುವ ಮೂಲಕ ಸಂಚಾರದ ಒತ್ತಡವನ್ನು ಕಡಿಮೆ ಮಾಡಿ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಬೆಂಗಳೂರು ನಗರ ಸಂಚಾರ ವಿಭಾಗದ ಪೊಲೀಸ್ ವೆಬ್‌ಸೈಟ್ ಅನ್ನು ಪ್ರತಿನಿತ್ಯ ಸಮಗ್ರ ಮಾಹಿತಿಗಳೊಂದಿಗೆ ಇಲ್ಲಿಯೇ ಅಪ್‌ಡೇಟ್ ಮಾಡಲಾಗುತ್ತಿರುತ್ತದೆ. ಹಾಗೂ ನಗರದಲ್ಲಿ ಅಳವಡಿಸಲಾಗಿರುವ ಸಿಗ್ನಲ್ ಲೈಟ್, ವಿ.ಎಂ.ಎಸ್, ಸರ್ವಿಲನ್ಸ್ ಕ್ಯಾಮರಾ ಇನ್ನಿತರೆ ತಾಂತ್ರಿಕ ಉಪಕರಣಗಳ ನಿಯಂತ್ರಣವನ್ನು ಮಾಡಬಹುದಲ್ಲದೆ, ಸಂದರ್ಭಕ್ಕೆ ತಕ್ಕಂತೆ ಮಾರ್ಪಾಡುಗಳನ್ನು ಮಾಡುವ ತಂತ್ರಜ್ಞಾನವನ್ನು ಒಳಗೊಂಡಿರುತ್ತದೆ.

❖ 10 ಜಂಕ್ಷನ್‌ಗಳಲ್ಲಿ ಆರ್.ಎಲ್.ವಿ.ಡಿ (Red Light Violation Detection) ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು ಸಿಗ್ನಲ್ ಜಂಪಿಂಗ್ ಮತ್ತು ಲೇನ್ ಡಿಸಿಪ್ಲಿನ್ ಉಲ್ಲಂಘನೆಗಳನ್ನು ಸ್ವಯಂಚಾಲಿತವಾಗಿ ಗುರ್ತಿಸುವ ಕ್ಷಮತೆಯನ್ನು ಹೊಂದಿರುವ ಸೌಲಭ್ಯವನ್ನು ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸಲು ಬಳಸಿಕೊಳ್ಳಲಾಗುತ್ತಿದೆ.

ಕ್ರಸಂ	ಸಂಚಾರ ಪೊಲೀಸ್ ಠಾಣೆ	ಕ್ಯಾಮೆರಾ ಅಳವಡಿಸಿರುವ ಜಂಕ್ಷನ್
1	ಕೆ.ಆರ್. ಪುರಂ ಸಂ.ಪೊ.ಠಾಣೆ	ಕೆ.ಆರ್. ಪುರಂ ಜಂಕ್ಷನ್
2	ಕಬ್ಬನ್‌ಪಾರ್ಕ್ ಸಂ.ಪೊ.ಠಾಣೆ	ಎಂ.ಜಿ. ರಸ್ತೆ ಜಂಕ್ಷನ್
3	ಯಲಹಂಕ ಸಂ.ಪೊ.ಠಾಣೆ	ಯಲಹಂಕ ಜಂಕ್ಷನ್
4	ಅಶೋಕನಗರ ಸಂ.ಪೊ.ಠಾಣೆ	ಈಜಿಪುರ ಜಂಕ್ಷನ್
5	ಎಲೆಕ್ಟ್ರಾನಿಕ್ ಸಿಟಿ ಸಂ.ಪೊ.ಠಾಣೆ	ಎಲೆಕ್ಟ್ರಾನಿಕ್ ಸಿಟಿ ಜಂಕ್ಷನ್
6	ಹೈಗ್ರೌಂಡ್ಸ್ ಸಂ.ಪೊ.ಠಾಣೆ	ಚಂದ್ರಿಕಾ ಜಂಕ್ಷನ್
7	ಆಡುಗೋಡಿ ಸಂ.ಪೊ.ಠಾಣೆ	ಆಡುಗೋಡಿ ಜಂಕ್ಷನ್
8	ವಿಲ್ಸನ್‌ಗಾರ್ಡನ್ ಸಂ.ಪೊ.ಠಾಣೆ	ಶಾಂತಿನಗರ ಜಂಕ್ಷನ್
9	ಹಲಸೂರು ಸಂ.ಪೊ.ಠಾಣೆ	ಎ.ಎಸ್.ಸಿ ಜಂಕ್ಷನ್
10	ಬ್ಯಾಟರಾಯನಪುರ ಸಂ.ಪೊ.ಠಾಣೆ	ಪಿ.ಇ.ಎಸ್.ಐ.ಟಿ ಜಂಕ್ಷನ್

❖ ನಗರದ ಸಂಚಾರ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಬಾಡಿ ವೋರ್ನ್ ಕ್ಯಾಮೆರಾಗಳನ್ನು ವಿತರಿಸಲಾಗಿದ್ದು ಇದರಿಂದಾಗಿ ಪರಿಣಾಮಕಾರಿಯಾಗಿ ನಿಯಮ ಜಾರಿಗೊಳಿಸಲು ಸಾಧ್ಯವಾಗುತ್ತಿದೆ.

- ❖ ಸಾರ್ವಜನಿಕರನ್ನು ಸಹ ಪರಿಣಾಮಕಾರಿಯಾಗಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸುವ ನಿಟ್ಟಿನಲ್ಲಿ ಬಳಸಿಕೊಳ್ಳಲಾಗುತ್ತಿದ್ದು ಪಬ್ಲಿಕ್ ಐ, ಐ ಚೇಂಜ್ ಮೈ ಸಿಟಿ ಆ್ಯಪ್‌ಗಳ ಜೊತೆಗೆ, ಫೇಸ್ ಬುಕ್, ಜಿಮೇಲ್, ನಂತಹ ಸಾಮಾಜಿಕ ಜಾಲತಾಣವನ್ನು ಸಹ ಬಳಸಿಕೊಳ್ಳಲಾಗುತ್ತಿದೆ.
- ❖ ಜಂಕ್ಷನ್‌ಗಳಲ್ಲಿ ಸಿಗ್ನಲ್ ಜಂಪಿಂಗ್ ಮಾಡಿ ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ.
- ❖ ಸಂಚಾರ ವಿಭಾಗದಲ್ಲಿ ಸಿಬ್ಬಂದಿಯ ಕೊರತೆ ಇದ್ದುದರಿಂದ ಸರ್ಕಾರದ ಮಂಜೂರಾತಿ ಪಡೆದು ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ಸಂಚಾರ ನಿಯಂತ್ರಣ ಮತ್ತು ನಿರ್ವಹಣೆಗೆ ಬಳಸಿಕೊಳ್ಳಲಾಗುತ್ತಿದೆ.
- ❖ ಬೆಂಗಳೂರು ನಗರ ಸಂಚಾರ ವಾರ್ಡನ್ ಸಂಸ್ಥೆ ಇದ್ದು, ಸಂಚಾರ ವಾರ್ಡನ್‌ಗಳನ್ನು ಸಹ ಸಂಚಾರ ನಿಯಂತ್ರಣಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ.
- ❖ ಸಾರ್ವಜನಿಕರಿಗೆ ಪಥ ಶಿಸ್ತು ಪಾಲನೆಯ ಬಗ್ಗೆ ಠಾಣಾ ಮತ್ತು ವಿಭಾಗೀಯವಾಗಿ ಹಲವಾರು ಕಡೆ ವಿಶೇಷ ಉಪನ್ಯಾಸವನ್ನು ಏರ್ಪಡಿಸಿ ಈ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- ❖ ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ದೈನಂದಿನ ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಭಿತ್ತಿ ಚಿತ್ರಗಳನ್ನು ಹಾಗೂ ಛಾಯಾ ಚಿತ್ರಗಳನ್ನು ಮುದ್ರಿಸಿ ಮತ್ತು ಆಂದೋಲನಗಳ ಮುಖೇನ ಪಥ ಶಿಸ್ತು ಪಾಲನೆಯ ಗುರಿ ಮತ್ತು ಉದ್ದೇಶಗಳನ್ನು ಸಾರ್ವಜನಿಕರಿಗೆ ಮನದಟ್ಟು ಮಾಡಲಾಗುತ್ತಿದೆ.
- ❖ ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಪ್ರತಿದಿನ ವಿದ್ಯಾರ್ಥಿಗಳು, ಪೋಷಕರು, ಆಟೋರಿಕ್ಷಾ, ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಮತ್ತು ಕ್ಯಾಬ್ ಚಾಲಕರುಗಳು ವೀಕ್ಷಣೆಗೆ ಬರುತ್ತಿದ್ದು ಅವರುಗಳಿಗೆ ಪಥ ಶಿಸ್ತು ಪಾಲನೆಯ ಬಗ್ಗೆ ವಿಡಿಯೋ ತುಣುಕುಗಳನ್ನು ತೋರಿಸುವುದರ ಮೂಲಕ ಹಾಗೂ ಉಪನ್ಯಾಸಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.
- ❖ ಬೆಂಗಳೂರು ನಗರದ ಥಣಿಸಂದ್ರದಲ್ಲಿರುವ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆಯಲ್ಲಿ ಸಹ ವೃತ್ತಿಪರ ಚಾಲಕರುಗಳಿಗೆ ಹಾಗೂ ಶಾಲಾ ವಾಹನಗಳ ಚಾಲಕರಿಗೆ ವಿಶೇಷವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತನ್ಮೂಲಕ ಅರಿವು ಮೂಡಿಸುವ ಉದ್ದೇಶವನ್ನು ಸಫಲಗೊಳಿಸಲಾಗುತ್ತಿದೆ.

<u>2. ಮೈಸೂರು ನಗರ</u>

1. ಮೈಸೂರು ನಗರದಲ್ಲಿ ಹೆಚ್ಚು ಸಂಚಾರ ದಟ್ಟಣೆಯಿರುವ 52 ವೃತ್ತ/ಜಂಕ್ಷನ್‌ಗಳಲ್ಲಿ ಸ್ವಯಂ ಚಾಲಿತ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಿ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.
2. ಸಂಚಾರ ನಿಯಂತ್ರಣ ಕರ್ತವ್ಯಕ್ಕೆ ಸಂಚಾರ ಸಿಬ್ಬಂದಿಗಳನ್ನು ನಿಯೋಜಿಸಿ ಸಾರ್ವಜನಿಕ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಲಾಗುತ್ತಿರುತ್ತದೆ.
3. ಸಂಚಾರ ದಟ್ಟಣೆ ಇರುವ ಸ್ಥಳಗಳಲ್ಲಿ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವ ಸಂಬಂಧ ಕೈಗೊಳ್ಳಬೇಕಾಗಿರುವ ರಸ್ತೆ ಸುಧಾರಣಾ ಕಾರ್ಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ವ್ಯವಹರಿಸಲಾಗುತ್ತಿರುತ್ತದೆ.
4. ಮೈಸೂರು ನಗರದಲ್ಲಿ ಅಟಲ್ ಬಿಹಾರಿ ವಾಜಪೇಯಿ ವೃತ್ತದಲ್ಲಿ (ರಿಂಗ್‌ರಸ್ತೆ-ಹುಣಸೂರು ರಸ್ತೆ ಜಂಕ್ಷನ್) ವಾಹನ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಈಗಾಗಲೇ ಮೇಲ್ಸೇತುವೆಯು ನಿರ್ಮಾಣಗೊಂಡಿದ್ದು, ಸಾರ್ವಜನಿಕ ವಾಹನಗಳ ಸಂಚಾರಕ್ಕೆ ಮುಕ್ತವಾಗಿದ್ದು, ಸದರಿ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಕಡಿಮೆಯಾಗಿರುತ್ತದೆ.

5. ಸಂಬಂಧಪಟ್ಟ ಇಲಾಖೆಗಳ ಸಹಕಾರದೊಂದಿಗೆ, ಸಾರ್ವಜನಿಕ ರಸ್ತೆಯನ್ನು ಅತಿಕ್ರಮಿಸಿಕೊಂಡಿರುವವರ ವಿರುದ್ಧ ಕಾರ್ಯಾಚರಣೆ ನಡೆಸಿ, ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ.

3. ಹುಬ್ಬಳ್ಳಿ-ಧಾರವಾಡ ನಗರ

1. ಒಂದೇ ರಸ್ತೆಯಲ್ಲಿ ಹೆಚ್ಚಿನ ವಾಹನ ದಟ್ಟನೆಯಿದ್ದಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಇದಕ್ಕೆ ಫರ್ಯಾಯವಾಗಿ ರಸ್ತೆಗಳನ್ನು ಗುರುತಿಸಿ ವಾಹನಗಳ ಮಾರ್ಗ ಬದಲಾವಣೆ ಮಾಡಿ ಸಂಚಾರ ಸರಿದೂಗುವಂತೆ ನೋಡಿಕೊಂಡಿದ್ದು ಇರುತ್ತದೆ.
2. ವಾಹನ ದಟ್ಟಣೆಯನ್ನು ನಿಯಂತ್ರಿಸಲು ಶಹರ ಪ್ರವೇಶಿಸುವ ಭಾರಿ ವಾಹನಗಳ ಸಂಚಾರವನ್ನು ರಿಂಗ್ ರೋಡ ಹಾಗೂ ಬೈ ಪಾಸ್‌ಗಳ ಮೂಲಕ ವಾಹನ ದಟ್ಟಣೆ ನಿಯಂತ್ರಿಸಿದ್ದು ಇರುತ್ತದೆ.
3. ಪ್ರಮುಖ ವೃತ್ತಗಳನ್ನು ಅಭಿವೃದ್ದಿ ಪಡಿಸಿ ವಾಹನ ದಟ್ಟಣೆ ನಿಯಂತ್ರಿಸಲಾಗುತ್ತದೆ.
4. ಮೇಲಂದ ಮೇಲೆ ಒಂದೇ ಸ್ಥಳಗಳಲ್ಲಿ ಹೆಚ್ಚು ಅಪಘಾತವಾಗುವ ಸ್ಥಳಗಳನ್ನು ಗುರುತಿಸಿ ಅಂತಹ ಸ್ಥಳಗಳನ್ನು ಕಪ್ಪು ಸ್ಥಳ ಅಂತಾ ಮಾಡಿ ಅಂತಹ ಸ್ಥಳಗಳಲ್ಲಿ ವಹನ ಚಾಲಕರುಗಳಿಗೆ ಕಾನುವಂತೆ ಸಂಚಾರ ನಿಯಮಗಳ ಬೋರ್ಡುಗಳನ್ನು ಅಳವಡಿಸಿದ್ದು ಇರುತ್ತದೆ. ಅಲ್ಲದೇ ಆದಾಗ್ಯೂ ಕೂಡಾ ಸಂಚಾರ ನಿಯಮ ಉಲ್ಲಂಘನೆ ಮಾಡಿದಲ್ಲಿ ಅಂತಹ ವಾಹನ ಚಾಲಕರುಗಳ ಮೇಲೆ ಹೆದ್ದಾರಿ ಗಸ್ತು ವಾಹನ ಮತ್ತು ಇಂಟರಸೆಪ್ಟರ್ ವಾಹನಗಳ ಸಹಾಯದಿಂದ ಮೋಟಾರು ವಾಹನ ಕಾಯ್ದೆ ಅಡಿಯಲ್ಲಿ ಕ್ರಮ ಜರುಗಿಸುತ್ತಾ ಹಾಗೂ ರಸ್ತೆ ಅಪಘಾತಗಳ ಪರಾಮರ್ಷೆಗಳ ಕುರಿತು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಸಹಯೋಗದೊಂದಿಗೆ ಅಪಘಾತಗಳ ಕುರಿತು ಸಮೀಕ್ಷೆ ಕೈಕೊಂಡಿದ್ದು ಇರುತ್ತದೆ.

4. ಮಂಗಳೂರು ನಗರ

1. ಒಂದೇ ರಸ್ತೆಯಲ್ಲಿ ಹೆಚ್ಚಿನ ವಾಹನ ದಟ್ಟನೆಯಿದ್ದಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಇದಕ್ಕೆ ಫರ್ಯಾಯವಾಗಿ ರಸ್ತೆಗಳನ್ನು ಗುರುತಿಸಿ ವಾಹನಗಳ ಮಾರ್ಗ ಬದಲಾವಣೆ ಮಾಡಿ ಸಂಚಾರ ಸರಿದೂಗುವಂತೆ ನೋಡಿಕೊಂಡಿದ್ದು ಇರುತ್ತದೆ.
2. ಮಂಗಳೂರು ಕಮಿಷರೇಟ್ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ಅಗತ್ಯ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನೇಮಿಸಲಾಗುತ್ತಿದೆ.
3. ಪ್ರಮುಖ ಜಂಕ್ಷನ್ ಅಥವಾ ಸ್ಥಳಗಳಲ್ಲಿ ರಿಫ್ಲೇಕ್ಟರ್‌ಗಳುಳ್ಳ ಬ್ಯಾರೀಕೇಡ್‌ಗಳನ್ನು ವ್ಯವಸ್ಥಿತವಾಗಿ ಇಟ್ಟು ಸಾರ್ವಜನಿಕ ಹಾಗೂ ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆಯಾಗದಂತೆ ಕ್ರಮ ಕೈಗೊಳ್ಳಲಾಗುತ್ತದೆ.
4. ಪ್ರಮುಖ ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಿ ಸಂಚಾರ ನಿಯಂತ್ರಣವನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ.

5. ಬೆಳಗಾವಿ ನಗರ

1. ಒಂದೇ ರಸ್ತೆಯಲ್ಲಿ ಹೆಚ್ಚಿನ ವಾಹನ ದಟ್ಟನೆಯಿದ್ದಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಇದಕ್ಕೆ ಫರ್ಯಾಯವಾಗಿ ರಸ್ತೆಗಳನ್ನು ಗುರುತಿಸಿ ವಾಹನಗಳ ಮಾರ್ಗ ಬದಲಾವಣೆ ಮಾಡಿ ಸಂಚಾರ ಸರಿದೂಗುವಂತೆ ನೋಡಿಕೊಂಡಿದ್ದು ಇರುತ್ತದೆ.
2. ಪ್ರಮುಖ ವೃತ್ತಗಳಲ್ಲಿ ಟ್ರಾಫಿಕ್ ಸಿಗ್ನಲ್ ಲೈಟಗಳನ್ನು ಅಳವಡಿಸಿ ಸಂಚಾರವನ್ನು ಸುಗಮಗೊಳಿಸಲಾಗುತ್ತಿದೆ.

3. ನಗರದ ಒಳಭಾಗದಲ್ಲಿ ತುರ್ತು ಮತ್ತು ಅಗತ್ಯ ಸೇವೆಗಳ ವಾಹನಗಳನ್ನು ಹೊರತುಪಡಿಸಿ ಆಯ್ದ ಸಮಯದಲ್ಲಿ ಸರಕು ಸಾಗಾಣಿಕೆ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿರುತ್ತದೆ.
4. ನಗರದಲ್ಲಿ ವಾಹನಗಳಿಗೆ ಪ್ರತ್ಯೇಕವಾದ ನಿಲುಗಡೆಗೆ ಸ್ಥಳ ಇಲ್ಲದ್ದರಿಂದ ಆಯ್ದ ರಸ್ತೆಗಳ ಬದಿಯಲ್ಲಿ ಸಮ-ವಿಷಮ ದಿನಾಂಕಗಳಂದು ವಾಹನಗಳ ನಿಲುಗಡೆಗೆ (Odd & Even Date Parking) ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ.
5. ಸುಗಮ ಸಂಚಾರಕ್ಕೆ ಅಡೆತಡೆ ಉಂಟಾಗದಂತೆ ಆಯ್ದ ಮಾರ್ಗಗಳಲ್ಲಿ ವಾಹನ ನಿಲುಗಡೆ ನಿರ್ಬಂಧಿತ ಪ್ರದೇಶ (No Parking) ಸ್ಥಳಗಳನ್ನು ಗುರ್ತಿಸಲಾಗಿದೆ.
6. ಜನಸಂದಣಿ ಪ್ರದೇಶಗಳಲ್ಲಿ ಇಂಟರಸೆಪ್ಟರ್ ವಾಹನಗಳನ್ನು ಬಳಸಿ ಪ್ರಚಾರಗೊಳಿಸಿ ಸಂಚಾರ ಸುಗಮಗೊಳಿಸಲಾಗುತ್ತಿದೆ.
7. ಸ್ಮಾರ್ಟ್ ಸಿಟಿ ಕಮಾಂಡ್ & ಕಂಟ್ರೋಲ್ ಸೆಂಟರ್ ಮುಖಾಂತರ ಕಣ್ಗಾವಲು ಮಾಡಿ ಸುಗಮ ಸಂಚಾರಕ್ಕೆ ಅಡೆತಡೆ ಮಾಡುತ್ತಿರುವ ವಾಹನಗಳನ್ನು ತೆರವುಗೊಳಿಸಲಾಗುತ್ತಿದೆ.
8. ಆಯ್ದ ಮಾರ್ಗಗಳಲ್ಲಿ ಏಕಮುಖ (One Way) ಸಂಚಾರ ವ್ಯವಸ್ಥೆ ಹಾಗೂ ವಾಹನ ಪ್ರವೇಶ ನಿಷೇಧ [No Entry] ಜಾರಿಗೊಳಿಸಲಾಗಿದೆ.
9. ದಿನ ನಿತ್ಯವಾಗಿ ಅಧಿಕಾರಿ ಮತ್ತು ಸಿಬ್ಬಂದಿಯವರನ್ನು ಸಂಚಾರ ನಿಯಂತ್ರಣ ಕರ್ತವ್ಯಕ್ಕೆ ನಿಯೋಜಿಸಿ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.

6. ಕಲಬುರಗಿ ನಗರ

ನಗರದ ಪ್ರಮುಖ ವೃತ್ತ ಮತ್ತು ವಾಹನ ದಟ್ಟಣೆ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಮತ್ತು ವಾಹನ ಚಾಲಕ/ಸವಾರರಿಗೆ ಸಂಚರಿಸಲು ಅನುಕೂಲವಾಗುವ ರೀತಿಯಲ್ಲಿ ಸುಗಮ ಸಂಚಾರ ಕುರಿತು ಕಲಬುರಗಿ ನಗರದಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಕೊಳ್ಳಲಾಗಿದೆ.

1. ಪ್ರಮುಖ ವಾಹನ ದಟ್ಟಣೆ ರಸ್ತೆಗಳಲ್ಲಿ ಎಡ ಮತ್ತು ಬಲ ಪಾರ್ಕಿಂಗ್ ನಿರ್ವಹಿಸಿಕೊಂಡು ಬರಲಾಗುತ್ತಿದೆ.
2. ಪ್ರಮುಖ ವಾಹನ ದಟ್ಟಣೆ ರಸ್ತೆಗಳಲ್ಲಿ ಕೆಲವೊಂದು ರಸ್ತೆಗಳಿಗೆ ಒನ್ ವೇ ಎಂದು ಆದೇಶಿಸಲಾಗಿದೆ.
3. ರಿಂಗ್ ರಸ್ತೆಯಿಂದ ಹಗಲಿನಲ್ಲಿ ಬೆಳಿಗ್ಗೆ 8-00 ಗಂಟೆ ರಾತ್ರಿ 9-00 ಗಂಟೆಯವರೆಗೆ ನಗರದ ಒಳಗಡೆ ಭಾರಿ ವಾಹನಗಳ ಪ್ರವೇಶ ನಿಷೇಧಿಸಲಾಗಿದೆ.
4. ನಗರದ ಕೆಲವೊಂದು ಪ್ರಮುಖ ವೃತ್ತ ಮತ್ತು ಸ್ಥಳಗಳಲ್ಲಿ ನೋ ಪಾರ್ಕಿಂಗ್ ಝೂನ್ ಎಂದು ಗುರುತಿಸಲಾಗಿದೆ.
5. ನಗರದಲ್ಲಿ ಅತಿ ಹೆಚ್ಚು ಅಟೋಗಳು ಸಂಚರಿಸುತ್ತಿದ್ದರಿಂದ ಅಟೋಗಳ ಸುಗಮ ಸಂಚಾರ ನಿರ್ವಹಣೆಗಾಗಿ ಅಟೋ ಸ್ಟ್ಯಾಂಡ್‌ಗಳನ್ನು ನಿರ್ಮಿಸಲಾಗಿದೆ.
6. ಪ್ರಮುಖ ರಸ್ತೆಗಳಲ್ಲಿ ಏಕ ಮುಖ ಮಾರ್ಗ, ಯು-ಟ್ರನ್ ನಿಷೇಧ, ಪಾರ್ಕಿಂಗ್ ನಿಷೇಧ, ಅಟೋರಿಕ್ಷಾಗಳ ಪಾರ್ಕಿಂಗ್ ನಿಷೇಧದ ಬಗ್ಗೆ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ.
7. ಪ್ರಮುಖ ವೃತ್ತಗಳಲ್ಲಿ ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸಿ ಸಂಚಾರ ದಟ್ಟಣೆಯನ್ನು ನಿಯಂತ್ರಿಸಲಾಗುತ್ತಿದೆ.

ಸಂಚಾರಿ ದಟ್ಟಣೆಯನ್ನು ಸರಿಪಡಿಸಲು ಜಿಲ್ಲೆ ಕೇಂದ್ರಗಳು ಮತ್ತು ಪಟ್ಟಣಗಳಲ್ಲಿ ಕೈಗೊಂಡ ಕ್ರಮಗಳ ವಿವರಗಳು ಈ ಕೆಳಕಂಡಂತಿದೆ.

1. ಬೆಂಗಳೂರು ಜಿಲ್ಲೆ

1. ಬೆಂಗಳೂರು ಜಿಲ್ಲಾ ಸರಹದ್ದುಗಳಲ್ಲಿ ಸಂಚಾರ ದಟ್ಟಣೆ ಇರುವುದರಿಂದ ಸಂಚಾರ ಫಲಕಗಳನ್ನು ಹಾಗೂ ಬ್ಯಾರಿಕೇಡ್‌ಗಳನ್ನು ಅಳವಡಿಸಿರುತ್ತೆ.
2. ಬೆಳಿಗ್ಗೆ ಹಾಗೂ ಸಂಜೆ ವೇಳೆಯಲ್ಲಿ ಕಾರ್ಖಾನೆಗೆ ಬರುವ ವಾಹನಗಳು ಹೆಚ್ಚಾಗಿರುವುದರಿಂದ ಈ ಸಮಯದಲ್ಲಿ ಸಂಚಾರ ಸುಗಮಗೊಳಿಸಲು ಪೊಲೀಸ್ ಸಿಬ್ಬಂದಿಯವರುಗಳನ್ನು ಸಂಚಾರ ದಟ್ಟಣೆ ನಿವಾರಣೆ ಕರ್ತವ್ಯಕ್ಕೆ ನೇಮಕ ಮಾಡಲಾಗುತ್ತಿರುತ್ತೆ.
3. ಬೆಂಗಳೂರು ಜಿಲ್ಲೆಯ ಸರಹದ್ದಿಗೆ ಹೊಂದಿಕೊಂಡಂತೆ ರಾಷ್ಟ್ರೀಯ ಹೆದ್ದಾರಿಗಳಿದ್ದು, ಪ್ರತಿ ದಿವಸ ಎಲ್ಲಾ ರೀತಿಯ ಸಣ್ಣ ಪ್ರಮಾಣದ ಹಾಗೂ ಬಾರಿ ಗಾತ್ರದ ವಾಹನಗಳು ಚಲಿಸುತ್ತಿರುವುದರಿಂದ ವಾಹನ ದಟ್ಟಣೆ ಹೆಚ್ಚಾಗಿರುವುದರಿಂದ ವಾಹನಗಳು ಅತಿವೇಗವಾಗಿ ಚಲಿಸದಂತೆ ನಿಗಧಿತ ವೇಗ ಮೀರಿ ವಾಹನ ಸಂಚರಿಸುವವರ ವಿರುದ್ಧ ಹಾಗೂ ರಸ್ತೆ ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಸಹ ಭಾರತ ಮೋಟಾರ್ ವಾಹನ ಕಾಯ್ದೆ ಅಡಿಗಳಲ್ಲಿ ವಾಹನ ಚಾಲಕರಿಗೆ ಸ್ಥಳ ದಂಡವನ್ನು ಸಹ ವಿಧಿಸುತ್ತಿರುತ್ತೆ. ಹಾಗೂ ವಾಹನಗಳು ಅತಿವೇಗವಾಗಿ ಚಲಿಸದಂತೆ ಎಚ್ಚರಿಕೆ ಫಲಕಗಳನನು ಸಹ ಸಂಚಾರಿ ಮಾರ್ಗದ ಅಕ್ಕ ಪಕ್ಕದಲ್ಲಿ ಅಳವಡಿಸಿರುತ್ತೆ
4. ಪ್ರತಿ ದಿವಸ ಸಿಬ್ಬಂದಿಯವರನ್ನು ಟ್ರಾಫಿಕ್ ಕರ್ತವ್ಯಕ್ಕೆ ನೇಮಕ ಮಾಡಿ ಸಂಚಾರ ದಟ್ಟಣೆಯಾಗದಂತೆ ನೋಡಿಕೊಳ್ಳಲು ಕ್ರಮ ಕೈಗೊಂಡಿರುತ್ತೆ. ಹೆಚ್ಚಾಗಿ ವಾಹನಗಳು ಓಡಾಡುವ ಕಡೆಗಳಲ್ಲಿ ವಾಹನಗಳನ್ನು ಚೆಕ್ ಮಾಡಿ ಸ್ಥಳ ದಂಡ ವಸೂಲಿ ಮಾಡಿರುತ್ತೆ.

2. ಕೋಲಾರ ಜಿಲ್ಲೆ

ಕೋಲಾರ ನಗರ ಸಂಚಾರ ನಿಯಂತ್ರಣ ಪೊಲೀಸ್ ಠಾಣೆಯ ಪೊಲೀಸರು ಸಂಚಾರ ನಿಯಮಗಳನ್ನು ಉಲ್ಲಂಘನೆ ಮಾಡುವ ವಾಹನ ಸವಾರರ ವಿರುದ್ಧ ಐಎಂವಿ ಆಕ್ಟ್ ರೀತ್ಯಾ ಸ್ಥಳದಂಡವನ್ನು ವಿಧಿಸುವುದರ ಜೊತೆಗೆ, ಠಾಣೆಯ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆಯ ಹೆಚ್ಚಾಗಿರುವ ಪ್ರಮುಖ ರಸ್ತೆಗಳನ್ನು ಮತ್ತು ಜಂಕ್ಷನ್‌ಗಳನ್ನು ಗುರ್ತಿಸಿ, ಅವುಗಳಲ್ಲಿ ಪ್ರಮುಖ ರಸ್ತೆಗಳಾದ ಎಂ.ಜಿ ರಸ್ತೆ, ದೊಡ್ಡಪೇಟೆ ರಸ್ತೆ, ಕಾಳಮ್ಮಗುಡಿ ಬೀದಿ, ಎಂ.ಬಿ ರಸ್ತೆ ಹಾಗೂ ಬಂಬೂ ಬಜಾರ್ ರಸ್ತೆಗಳಲ್ಲಿ ವಾಹನಗಳ ಸಂಚಾರ ದಟ್ಟಣೆ ಹೆಚ್ಚಾಗಿರುತ್ತದೆ. ಆದ್ದರಿಂದ ಸದರಿ ರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿಕೊಂಡು ಜಿಲ್ಲಾಧಿಕಾರಿಯವರ ಆದೇಶ ಪಡೆದುಕೊಂಡು ಏಕಮುಖ ರಸ್ತೆಗಳನ್ನಾಗಿ ಮಾರ್ಪಾಡು ಮಾಡಿರುತ್ತದೆ. ಅದೇ ರೀತಿ ಸದರಿ ರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ತೊಂದರೆಯಾಗುವ ರೀತಿಯಲ್ಲಿ ರಸ್ತೆಯಲ್ಲಿ ಅನಗತ್ಯವಾಗಿದ್ದ ವಿದ್ಯುತ್ ಕಂಬಗಳನ್ನು ತೆರವು ಮಾಡಿಸಿ, ಬದಲಿ ದಿನಗಳಲ್ಲಿ ವಾಹನಗಳ ನಿಲುಗಡೆಯ ವ್ಯವಸ್ಥೆಯನ್ನು ಮಾಡಿರುತ್ತದೆ. ನಗರದಲ್ಲಿ ಸಾರ್ವಜನಿಕರ ವಾಹನಗಳ ಸುಗಮ ಸಂಚಾರಕ್ಕಾಗಿ ವಾಹನಗಳ ದಟ್ಟಣೆಯ ಹೆಚ್ಚಾಗಿರುವ ರಸ್ತೆಗಳಲ್ಲಿ ಸೂಚನಾ ಫಲಕಗಳನ್ನು ಅಳವಡಲಾಗಿರುತ್ತದೆ. ಹಾಗೂ ಪ್ರಮುಖ ರಸ್ತೆಗಳಲ್ಲಿ ಬಿಳಿ ಬಣ್ಣದ ಪಟ್ಟಿಗಳನ್ನು ಹಾಕಿಸುವ ಮೂಲಕ ಸಾರ್ವಜನಿಕರ ವಾಹನಗಳ ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ಕ್ರಮ ಕೈಗೊಂಡಿರುತ್ತದೆ.

3. ಕೆ.ಜಿ.ಎಫ್

1. ಸಂಚಾರ ದಟ್ಟಣೆ ಇರುವ ರಸ್ತೆಗಳನ್ನು ಏಕಮುಖ ರಸ್ತೆ ಮಾಡಿ ವಾಹನಗಳ ಸುಗಮ ಸಂಚಾರಕ್ಕೆ ಅನುವುಮಾಡಿಕೊಟ್ಟಿರುತ್ತದೆ.
2. ಸಂಚಾರಿ ದಟ್ಟಣೆ ಇರುವ ರಸ್ತೆಗಳಲ್ಲಿ ಇರುವ ಪುಟ್ಪಾತ್ ಅಂಗಡಿಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವುಮಾಡಿಕೊಟ್ಟಿರುತ್ತದೆ.

3. ಸಂಚಾರಿ ದಟ್ಟಣೆ ಇರುವ ರಸ್ತೆಗಳಲ್ಲಿ ಎರಡೂ ಕಡೆಯ ಅಂಗಡಿ ಮಾಲಿಕರುಗಳಿಗೆ ವಾಹನಗಳನ್ನು ನಿಲ್ಲಿಸದಂತೆ ಆಡ್ ಮತ್ತು ಈವನ್ ನಂಬರಿನ ಫಲಕಗಳನ್ನು ಅಳವಡಿಸಿ ವಾಹನಗಳನ್ನು ಒಂದು ಕಡೆ ನಿಲ್ಲಿಸುವಂತೆ ಕ್ರಮ ಕೈಗೊಂಡಿರುತ್ತದೆ.
4. ಸಂಚಾರಿ ದಟ್ಟಣೆ ಇರುವ ರಸ್ತೆಗಳಲ್ಲಿ ದಟ್ಟಣೆಯನ್ನು ಸರಿಪಡಿಸಲು ಪೋಲೀಸ್ ಸಿಬ್ಬಂದಿಯನ್ನು ನೇಮಿಸಿ ಆಗಿಂದ್ದಾಗ್ಗೆ ದಟ್ಟಣೆಯನ್ನು ಸರಿಪಡಿಸಿ ಸುಗಮ ಸಂಚಾರಕ್ಕೆ ಅನುವುಮಾಡಿಕೊಡಲಾಗುತ್ತಿರುತ್ತದೆ.

3. <u>ತುಮಕೂರು ಜಿಲ್ಲೆ</u>

1. ತುಮಕೂರು ನಗರದಲ್ಲಿ ಸಂಚಾರಿ ದಟ್ಟಣೆಯನ್ನು ತಪ್ಪಿಸಲು ಹಾಲಿ ಇದ್ದ ಸಿಗ್ನಲ್‌ಲೈಟ್‌ಗಳ ಜೊತೆಗೆ ಅವಶ್ಯವಿರುವ ಕಡೆಗಳಲ್ಲಿ ಹೆಚ್ಚುವರಿಯಾಗಿ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಿರುತ್ತದೆ.
2. ಟೌನ್‌ಹಾಲ್ ಸರ್ಕಲ್ ಹಾಗೂ ತುಮಕೂರು ವಿಶ್ವವಿದ್ಯಾಲಯದ ಬಳಿ ಸ್ಕೈ ವಾಕ್‌ಗಳನ್ನು ನಿರ್ಮಾಣ ಮಾಡಿರುತ್ತದೆ.
3. ರಸ್ತೆಯ ಇಕ್ಕೆಲಗಳಲ್ಲಿ ಆಲ್ಟರ್ನೇಟೀವ್ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಿರುತ್ತದೆ.
4. ಸಿಸಿ ಕ್ಯಾಮೆರಾಗಳನ್ನು ಅಳವಡಿಸಿದ್ದು, ಸಂಚಾರಿ ದಟ್ಟಣೆ ಉಂಟು ಮಾಡುವವರಿಗೆ, ಸ್ಥಳದಲ್ಲಿಯೇ ಸಿಬ್ಬಂದಿಗಳು ಎಚ್ಚರಿಕೆಯನ್ನು ನೀಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
5. ಪೊಲೀಸ್ ಇಲಾಖೆ ವತಿಯಿಂದ ಗಸ್ತು ಸಂಚಾರ ವಾಹನಗಳನ್ನು (ಇಂಟರ್‌ಸೆಪ್ಟರ್, ಹೈ ವೇ ಮೊಬೈಲ್, 112 ವಾಹನ ಹಾಗೂ ಚೀತಾ ಗಸ್ತು ವಾಹನ) ನೇಮಿಸಿದ್ದು, ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿರುತ್ತವೆ.
6. ಜನ ದಟ್ಟಣೆ ಇರುವ ರಸ್ತೆಗಳಲ್ಲಿ ಏಕ ಮುಖ (One way) ಸಂಚಾರ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
7. ಸಂಚಾರಿ ದಟ್ಟಣೆ ಹೆಚ್ಚಾಗಿರುವ ಕಡೆಗಳಲ್ಲಿನ ರಸ್ತೆಗಳನ್ನು ಅಗಲೀಕರಣಗೊಳಿಸಲಾಗಿದೆ.

4. <u>ರಾಮನಗರ ಜಿಲ್ಲೆ</u>

1. ಸಂಚಾರಿ ದಟ್ಟಣೆ ಇರುವ ಕಡೆ ಹೆಚ್ಚಿನ ಸಿಬ್ಬಂದಿಗಳನ್ನು ನೇಮಿಸಿ ಕ್ರಮ ಕೈಗೊಂಡಿರುತ್ತೆ.
2. ಸಂಚಾರಿ ದಟ್ಟಣೆ ಯಾವುದರಿಂದ ಉಂಟಾಗಿರುತ್ತೆ ಎಂಬುದನ್ನು ಪರಿಶೀಲಿನೆ ಮಾಡಿ ಅಡೆತಡೆಯನ್ನು ಸರಿಪಡಿಸಿ ಸಂಚಾರ ದಟ್ಟಣೆಯನ್ನು ಸರಿಪಡಿಸಲಾಗುತ್ತಿರುತ್ತೆ.
3. ಸಂಚಾರಿ ದಟ್ಟಣೆ ಇರುವ ಕಡೆ ಬ್ಯಾರಿಕೇಡ್ಸ್ ಗಳನ್ನು ಅಳವಡಿಸಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟಿರುತ್ತೆ.
4. ಸಂಚಾರ ದಟ್ಟಣೆಗೆ ಕಾರಣ ಕರ್ತರಾಗಿರುವವರ ಮೇಲೆ ಸಂಚಾರಿ ನಿಯಮದಡಿ ದಂಡವನ್ನು ವಿಧಿಸಿ ಐಎಂವಿ ಪ್ರಕರಣಗಳನ್ನು ದಾಖಲಿಸಿ ಕ್ರಮಕೈಗೊಳ್ಳಲಾಗಿರುತ್ತೆ.

5. <u>ಚಿಕ್ಕಬಳ್ಳಾಪುರ ಜಿಲ್ಲೆ</u>

1. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿರುವ ಪ್ರಮುಖ ರಸ್ತೆಗಳನ್ನು ಮತ್ತು ಜಂಕ್ಷನ್‌ಗಳನ್ನು ಗುರುತಿಸಿ ಅಲ್ಲಿ ಹಂಸಗಳನ್ನು ಹಾಕಿಸಲು ಸಂಬಂಧಪಟ್ಟ ಸಾರಿಗೆ ಇಲಾಖೆಯವರಿಗೆ ಪತ್ರ ವ್ಯವಹಾರ ಮಾಡಲಾಗಿರುತ್ತದೆ.
2. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿರುವ ಪ್ರಮುಖ ರಸ್ತೆಗಳನ್ನು ಮತ್ತು ಜಂಕ್ಷನ್‌ಗಳನ್ನು ಗುರುತಿಸಿ ಅಲ್ಲಿ ಹಂಸಗಳನ್ನು ಹಾಕಿಸಲು ಸಂಬಂಧಪಟ್ಟ ಸಾರಿಗೆ ಇಲಾಖೆಯವರಿಗೆ ಪತ್ರ ವ್ಯವಹಾರ ಮಾಡಲಾಗಿರುತ್ತದೆ.
3. ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ತೊಂದರೆಯಾಗುವ ರೀತಿಯಲ್ಲಿ ರಸ್ತೆಯಲ್ಲಿ ಅನಗತ್ಯವಾಗಿದ್ದ ವಿದ್ಯುತ್ ಕಂಬಗಳನ್ನು ತೆರವು ಮಾಡಿಸಲು ಸಬಂಧಪಟ್ಟ ಪ್ರಾಧಿಕಾರಿರವರಿಗೆ ಪತ್ರ ವ್ಯವಹಾರ ಮಾಡಲಾಗಿರುತ್ತದೆ.

3. ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ತೊಂದರೆಯಾಗುವ ರೀತಿಯಲ್ಲಿ ರಸ್ತೆಯಲ್ಲಿ ಅನಗತ್ಯವಾಗಿದ್ದ ವಿದ್ಯುತ್ ಕಂಬಗಳನ್ನು ತೆರವು ಮಾಡಿಸಲು ಸಬಂಧಪಟ್ಟ ಪ್ರಾಧಿಕಾರಿರವರಿಗೆ ಪತ್ರ ವ್ಯವಹಾರ ಮಾಡಲಾಗಿರುತ್ತದೆ.
4. ಸಾರ್ವಜನಿಕರ ವಾಹನಗಳ ಸುಗಮ ಸಂಚಾರಕ್ಕಾಗಿ ವಾಹನಗಳ ದಟ್ಟಣೆಯು ಹೆಚ್ಚಾಗಿರುವ ರಸ್ತೆಗಳಲ್ಲಿ ಸಂಚಾರ ನಿಯಮಗಳನ್ನು ಪಾಲಿಸಲು ಸೂಚನಾ ಫಲಕಗಳನ್ನು ಅಳವಡಿಸಲಾಗಿರುತ್ತದೆ.
5. ಚಿಕ್ಕಬಳ್ಳಾಪುರ ಜಿಲ್ಲೆಯ ಜಿಲ್ಲಾ ಕೇಂದ್ರದಲ್ಲಿ ಪಾದಚಾರಿಗಳ ಸುಗಮ ಸಂಚಾರಕ್ಕಾಗಿ ಝೀಬ್ರಾ ಕ್ರಾಸಿಂಗ್ ವ್ಯವಸ್ಥೆ ಮತ್ತು ಬಿಳಿ ಬಣ್ಣದ ಪಟ್ಟಿಗಳನ್ನು ಹಾಕಿಸುವ ಮೂಲಕ ಸಾರ್ವಜನಿಕರ ವಾಹನಗಳ ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ಕ್ರಮ ಕೈಗೊಂಡಿರುತ್ತದೆ.

6. <u>ಮೈಸೂರು ಜಿಲ್ಲೆ</u>

ಮೈಸೂರು ಜಿಲ್ಲೆ ನಂಜನಗೂಡು ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಚಾರಿ ಪೊಲೀಸರು ಸಂಚಾರಿ ದಟ್ಟಣೆಯನ್ನು ಸರಿಪಡಿಸುವ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಜಿಲ್ಲೆಯ ಇತರೆ ಠಾಣಾ ವ್ಯಾಪ್ತಿಯಲ್ಲಿ ಸಿವಿಲ್ ಪೊಲೀಸ್ ಅಧಿಕಾರಿ ಸಿಬ್ಬಂದಿಗಳಿಗೆ ಸಂಚಾರಿ ನಿಯಮಗಳ ತರಬೇತಿಯನ್ನು ನೀಡಲಾಗಿದ್ದು, ಸಂಚಾರಿ ದಟ್ಟಣೆಯನ್ನು ಸರಪಡಿಸುವ ಕರ್ತವ್ಯವನ್ನೂ ನಿರ್ವಹಿಸುತ್ತಿದ್ದಾರೆ.

7. <u>ಮಂಡ್ಯ ಜಿಲ್ಲೆ.</u>

ಸಂಚಾರಿ ದಟ್ಟಣೆಯನ್ನು ಸರಿಪಡಿಸಲು ಸರ್ಕಾರ ಸೂಚಿಸಿರುವ ಪ್ರಕಾರ ಸಂಚಾರ ದಟ್ಟಣೆ ಇರುವ ಸ್ಥಳಗಳಲ್ಲಿ ಸಂಚಾರ ನಿಯಂತ್ರಣ ಸೂಚನಾ ದೀಪಗಳು, ಸೈನ್ ಬೋರ್ಡ್‌ಗಳು, ಬ್ಲಿಂಕರ್‌ಗಳು, ಪೊಲೀಸ್ ಚೌಕಿಗಳ ನಿರ್ಮಾಣ, ರಸ್ತೆ ಸಂಚಾರ ಸಂಬಂಧಪಟ್ಟ ಹಳದಿ ಬಣ್ಣದ ಪಟ್ಟಿ, ಜೀಬ್ರಾ ಕ್ರಾಸ್, ಸಿಗ್ನಲ್ ಚೌಕಿಗಳನ್ನು ಅಳವಡಿಸುವುದು ಹಾಗೂ ಸಂಚಾರ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಅಧಿಕ ವಾಹನ ಸಂಚಾರ ಇರುವ ಸ್ಥಳಗಳಿಗೆ ನೇಮಿಸಿ ಸಂಚಾರಿ ದಟ್ಟಣೆಯನ್ನು ನಿಯಂತ್ರಿಸುವ ಕ್ರಮ ಕೈಗೊಳ್ಳಲಾಗಿದೆ.

8. <u>ಹಾಸನ ಜಿಲ್ಲೆ</u>

ಹಾಸನ ನಗರ ನಗರದಲ್ಲಿ ಸಂಚಾರ ದಟ್ಟಣೆ ಸರಿಪಡಿಸಲು ರಸ್ತೆಯ ವಿಸ್ತೀರ್ಣ ಹಾಗೂ ಸಂಚರಿಸುವ ವಾಹನಗಳ ಸಂಖ್ಯೆಗಳಿಗನುಗುಣವಾಗಿ ಏಕಮುಖ ಸಂಚಾರ ಮತ್ತು ದ್ವಿಮುಖ ಸಂಚಾರ ರಸ್ತೆಗಳನ್ನಾಗಿ ಮಾರ್ಪಡಿಸಲಾಗಿದೆ. ಹಾಸನ ನಗರ ಮತ್ತು ಚನ್ನರಾಯಪಟ್ಟಣ ನಗರದಲ್ಲಿ ವಾಹನಗಳ ನಿಲುಗಡೆಗೆ ಸ್ಥಳಗಳನ್ನು ಪರಿಶೀಲಿಸಿ ಪಾರ್ಕಿಂಗ್ ಬೋರ್ಡ್‌ಗಳನ್ನು ಹಾಕಲಾಗಿದೆ ಹಾಗೂ ವಾಹನಗಳಿಗೆ ಓಡಾಡಲು ತೊಂದರೆಯಾಗುವ ರಸ್ತೆಗಳಲ್ಲಿ ನೋಪಾರ್ಕಿಂಗ್ ಫಲಕಗಳನ್ನು ಅಳವಡಿಸಲಾಗಿದೆ. ವಾಹನಗಳು ಸಂಚಾರಿಸುವಾಗ ಅಪಘಾತವಾಗದಂತೆ ನಗರದ ಮುಖ್ಯ ಸರ್ಕಲ್‌ಗಳಲ್ಲಿ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಿ, ಸಿಗ್ನಲ್‌ಗಳಲ್ಲಿ ಸೂಚನೆ ನೀಡಿದಾಗ ವಾಹನಗಳು ಚಲಿಸುವಂತೆ ವ್ಯವಸ್ಥೆ ಮಾಡಲಾಗಿದೆ. ಹಾಗೂ ಪ್ರತಿ ಮುಖ್ಯ ಸರ್ಕಲ್‌ಗಳಲ್ಲಿ ಸಂಚಾರ ಸಿಬ್ಬಂದಿಯವರನ್ನು ಪ್ರತಿನಿತ್ಯ ಕರ್ತವ್ಯಕ್ಕೆ ನೇಮಿಸಿ ಸುಗಮ ಸಂಚಾರ ವ್ಯವಸ್ಥೆಗೆ ತೊಂದರೆಯಾಗದಂತೆ ಅನುಕೂಲ ಮಾಡಿಕೊಡಲಾಗಿದೆ.

9. <u>ಚಾಮರಾಜ ನಗರ ಜಿಲ್ಲೆ</u>

1. ಚಾಮರಾಜನಗರ ಸಂಚಾರ ನಿಯಂತ್ರಣ ಪೊಲೀಸ್ ಠಾಣೆಯ ಪೊಲೀಸರು ತಮ್ಮ ವ್ಯಾಪ್ತಿಯ ನಗರಸಭಾ ವ್ಯಾಪ್ತಿಯಲ್ಲಿ ಜನದಟ್ಟಣೆ ಇರುವ ರಸ್ತೆ, ಏರಿಯಾ, ಮೊಹಲ್ಲಾಗಳ ಕಡೆ ವೇಗ ಮಿತಿಯನ್ನು 40 ಕಿ.ಮೀ ಗೆ ನಿಗಧಿಪಡಿಸುವಂತೆ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಿದ ಮೇರೆಗೆ ಜಿಲ್ಲಾಧಿಕಾರಿಯವರು ನಗರಸಭಾ ವ್ಯಾಪ್ತಿಯ ಪ್ರದೇಶದಲ್ಲಿ ವೇಗ ಮಿತಿಯನ್ನು 40 ಕಿ.ಮೀ ನಿಗಧಿಪಡಿಸಿ ಅಧಿಸೂಚನೆ ಹೊರಡಿಸಿರುತ್ತಾರೆ.

28. <u>ಕೊಪ್ಪಳ ಜಿಲ್ಲೆ</u>

1. ಜನದಟ್ಟಣೆ ರಸ್ತೆಗಳಲ್ಲಿ ಏಕ ಪಥ ನಿಲುಗಡೆ ಮಾಡಲಾಗುತ್ತಿದೆ.
2. ಕೊಪ್ಪಳ ಜಿಲ್ಲೆಯಲ್ಲಿ ಕೊಪ್ಪಳ ನಗರದ ಅಶೋಕ ಮತ್ತು ಬಸವೇಶ್ವರ ವೃತ್ತ ಮತ್ತು ಗಂಗಾವತಿ ನಗರದ ಸಿ.ಬಿ.ಎಸ್ ಮತ್ತು ನೀಲಕಂಠೇಶ್ವರ ವೃತ್ತ ಮುಂತಾದ ಜನದಟ್ಟಣೆಯ ವೃತ್ತಗಳಲ್ಲಿ ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸಲಾಗಿರುತ್ತದೆ.
3. ಪೊಲೀಸ್ ಸಿಬ್ಬಂದಿಯನ್ನು ಕರ್ತವ್ಯಕ್ಕೆ ನಿಯೋಜಿಸಿ, ಸಂಚಾರ ದಟ್ಟಣೆಯನ್ನು ನಿಯಂತ್ರಣೆ ಮಾಡಲಾಗುತ್ತಿದೆ.
4. ಕೊಪ್ಪಳ ಮತ್ತು ಗಂಗಾವತಿ ನಗರಗಳಲ್ಲಿ ಭಾರಿ ಜನ ದಟ್ಟಣೆ ಇರುವ ರಸ್ತೆಗಳಲ್ಲಿ ಏಕಮುಖ (Oneway), Parking, No-parking, ವೇಗದ ಮಿತಿ ನಿಗದಿ, ಲಾರಿ ಟರ್ಮಿನಲ್ ಸ್ಥಳ ನಿಗದಿ, ಭಾರಿ ಸರಕು ವಾಹನಗಳ ಮಾರ್ಗ, ಸಮಯ ನಿಗದಿ, ನಗರ ಪ್ರದೇಶಗಳಲ್ಲಿ ಭಾರಿ ವಾಹನಗಳ ಪ್ರವೇಶ ನಿಷೇಧ ಮುಂತಾದ ಸಂಚಾರ ಸುವ್ಯವಸ್ಥೆಯ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳಿಂದ ಅಧಿಸೂಚನೆಗೊಳಪಡಿಸಿ ಸಂಚಾರ ಸುವ್ಯಸ್ಥೆಯ ನಿಯಮಗಳನ್ನು ಜಾರಿಗೊಳಿಸಲಾಗುತ್ತಿದೆ.
5. ಜಿಲ್ಲೆಯ ನಗರ ಮತ್ತು ಪಟ್ಟಣಗಳಲ್ಲಿ ಹಾಯ್ದು ಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಹಾಗೂ ಸಂಚಾರ ದಟ್ಟಣೆಯ ರಸ್ತೆಗಳಲ್ಲಿ ಸಂಚಾರ ನಿಯಮಗಳ ಸೂಚನಾ ಫಲಕ, ಸಂಚಾರ ಸುರಕ್ಷತೆಯ ಇತರೆ ವಸ್ತುಗಳನ್ನು ಅಳವಡಿಸಲಾಗಿದೆ.
6. ನಗರ ಮತ್ತು ಪಟ್ಟಣಗಳ ರಸ್ತೆ ಬದಿಯಲ್ಲಿ ಪಾದಚಾರಿಗಳಿಗೆ ತೊಂದರೆಯಾಗದಂತೆ ಪಾದಚಾರಿ ಮಾರ್ಗಗಳನ್ನು ಅಡೆ-ತಡೆಗಳಿಂದ ಮುಕ್ತಗೊಳಿಸುವ ಕ್ರಮ ಕೈಗೊಳ್ಳಲಾಗಿದೆ.

29. <u>ಬಳ್ಳಾರಿ ಜಿಲ್ಲೆ</u>

1. ಜಿಲ್ಲಾ ಕೇಂದ್ರ ಮತ್ತು ಪಟ್ಟಣ ಪ್ರದೇಶಗಳನ್ನು ಸಂಚಾರ ದಟ್ಟಣೆ ಯಾಗದಂತೆ ಪ್ರಮುಖ ಸರ್ಕಲ್ ಮತ್ತು ಇತರೆ ಸಂಚಾರ ದಟ್ಟಣೆ ಯಾಗುವ ಏರಿಯಾಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಸಿಬ್ಬಂದಿಗಳನ್ನು ನೇಮಕ ಮಾಡಿ ಸುಗಮ ಸಂಚಾರಕ್ಕೆ ಕ್ರಮ ಕೈಗೊಳ್ಳಲಾಗುತ್ತದೆ.
2. ಏಕಮುಖ ಸಂಚಾರ, ನಿಷೇದತ ಪ್ರದೇಶಗಳಲ್ಲಿ ವಾಹನ ನಿಲುಗಡೆಯಾಗದಂತೆ ಕ್ರಮಕೈಗೊಳ್ಳುವುದು.
3. ಭಾರಿ ವಾಹನಗಳಿಗೆ ನಗರದ ಒಳಗೆ ಸಂಚಾರ ನಿಷೇಧ ಮಾಡುವ ಅಥವಾ ಭಾರಿ ವಾಹನಗಳಿಗೆ ನಗರದಲ್ಲಿ ಸಂಚರಿಸಲು ಸಮಯ ನಿಗಧಿಪಡಿಸುವ ಮೂಲಕ.
4. ಜಿಲ್ಲಾ ಕೇಂದ್ರ ಮತ್ತು ಪಟ್ಟಣ ಪ್ರದೇಶಗಳಲ್ಲಿ ವಾಹನ ನಿಲುಗಡೆಗೆ ಬೆಸ ಮತ್ತು ಸಮ ದಿನಾಂಕಗಳನ್ನು ನಿಗಧಿಪಡಿಸುವ ಮೂಲಕ ವಾಹನ ದಟ್ಟಣೆಯನ್ನು ನಿಯಂತ್ರಿಸಲಾಗುತ್ತದೆ.

30. <u>ವಿಜಯನಗರ ಜಿಲ್ಲೆ</u>

ಜಿಲ್ಲಾ ಕೇಂದ್ರ ಮತ್ತು ಪಟ್ಟಣ ಪ್ರದೇಶಗಳನ್ನು ಸಂಚಾರ ದಟ್ಟಣೆ ಯಾಗದಂತೆ ಪ್ರಮುಖ ಸರ್ಕಲ್ ಮತ್ತು ಇತರೆ ಸಂಚಾರ ದಟ್ಟಣೆಯಾಗುವ ಪ್ರದೇಶಗಳಲ್ಲಿ ಸಿಬ್ಬಂದಿಗಳನ್ನು ನೇಮಕ ಮಾಡಿ ಸುಗಮ ಸಂಚಾರಕ್ಕೆ ಕ್ರಮ ಕೈಗೊಳ್ಳಲಾಗುತ್ತದೆ. ಅಲ್ಲದೆ ಏಕಮುಖ ಸಂಚಾರ, ನಿಷೇದಿತ ಪ್ರದೇಶಗಳಲ್ಲಿ ವಾಹನ ನಿಲುಗಡೆ, ಕೆಲವು ಬಾರಿ ವಾಹನ ಸಂಚಾರ ನಿಷೇದ ಮಾಡುವ ಮೂಲಕ ವಾಹನ ದಟ್ಟಣೆಯನ್ನು ನಿಯಂತ್ರಿಸಲಾಗುತ್ತದೆ.

* * *